INDIAN JOURNAL OF HISTORY AND ARCHAEOLOGY
ISSN (e):2582-225X
Vol-4, Issue -2, July-August, 2022,
PageNo,69-76
Peer Reviewed Journal, Referred Journal

# ನಂಜಲದಿನ್ನಿ ಪರಿಸರದಲ್ಲಿ ನವಶಿಲಾಯುಗದ ಬಯಲು ಬಂಡೆ ಚಿತ್ರಗಳ ಶೋಧ

ನಾಗರಾಜ [1]
ಡಾ.ಕೆ.ಎನ್. ಮೋಹನ್[2]

ಕರ್ನಾಟಕವು ಕಲೆಯ ದೃಷ್ಟಿಯಿಂದ ಸಿರಿವಂತಿಕೆಯ ಬೀಡು. ಈ ನಾಡಿನ ಕಲೆಯ ಪ್ರಾಚೀನತೆ ಹಾಗೂ ಅದರ ವಿಕಸನ ಮತ್ತು ವೈಶಿಷ್ಟ್ಯತೆಯ ಬಗ್ಗೆ ಈಗಾಗಲೇ ಅನೇಕ ಪ್ರಾಕ್ತನಶಾಸ್ತ್ರಜ್ಞರು ಹಾಗೂ ಹವ್ಯಾಸಿ ಸಂಶೋಧಕರಿಂದ ಪ್ರಾಗಿತಿಹಾಸಿಕ ವರ್ಣಚಿತ್ರಗಳು, ಕಟ್ಟು, ಗೀರುಚಿತ್ರಗಳ ಜೊತೆಗೆ ಕಲ್ಗುಳಿಗಳ ನೆಲೆಯನ್ನು ಶೋಧಿಸಿ ಪ್ರಕಟಿಸಿದ್ದಾರೆ. ಅದರಲ್ಲೂ ಮುಖ್ಯವಾಗಿ ಮಸ್ಕಿ ನೆಲೆಯ ಬಂಡೆ ಚಿತ್ರಗಳನ್ನು ಕುರಿತಂತೆ ಮುನ್ನ ಸಿ.ಎಲ್ (1935),[1] ಲಿಯೋನಾರ್ಡ್ ಮನ್ (1940)[2], ಗೋರ್ಡನ್ ಮತ್ತು ಆಲ್ಚಿನ್ ದಂಪತಿಗಳು–(1955)[3], ಅ. ಸುಂದರ (1985)[4], ಚನ್ನಬಸಪ್ಪ ಮಲ್ಕಂದಿನ್ನಿ (2015)[5] (2017)[6] ಮತ್ತು ಇತ್ತೀಚಿಗೆ ಮೋಹನ್.ಆರ್[7] ಎಂಬ ವಿದ್ವಾಂಸರು ಈ ಬಗ್ಗೆ ಅಧ್ಯಯನ ಮಾಡಿದ್ದಾರೆ. ಅದರಂತೆ ಮಸ್ಕಿ ತಾಲೂಕಿನ ನಂಜಲದಿನ್ನಿ ಗ್ರಾಮವು ಸಹ ನವಶಿಲಾಯುಗ ಕಾಲದ ನೆಲೆಯಾಗಿದ್ದು ವಿಶೇಷವಾಗಿ ಈ ಕಾಲಾವಧಿಯ ಕುಟ್ಟುಚಿತ್ರಗಳು ಹೇರಳವಾಗಿ ಕಂಡುಬಂದಿವೆ ಈ ನಂಜಲದಿನ್ನಿ ಮತ್ತು ಸುತ್ತಲಿನ ಪರಿಸರವು ಪ್ರಾಕ್ತನಾ ನೆಲೆಯಾಗಿ ಅನೇಕ ವೈಶಿಷ್ಟತೆಗಳನ್ನು ಹೊಂದಿದ್ದರು ಇಲ್ಲಿಯವರೆಗೆ ಯಾವುದೇ ಸಂಶೋಧಕರು ಈ ಕಡೆ ಗಮನಿಸದಿರುವುದು ವಿರ್ಪಯಾಸವೇ ಸರಿ.

ಈ ಬೆಟ್ಟವು ಹಂಪನಾಳ ಗ್ರಾಮದ ಕಂದಾಯ ವ್ಯಾಪ್ತಿಗೆ ಸೇರಿದ್ದು, ನಂಜಲದಿನ್ನಿ ಗ್ರಾಮದ ಪಶ್ಚಿಮಕ್ಕೆ ಸು. 1 ಕಿ.ಮೀ ದೂರದಲ್ಲಿದೆ. ಈ ಬೆಟ್ಟವನ್ನು ಸ್ಥಳೀಯ ಗ್ರಾಮಸ್ಥರು ಕನಕಪ್ಪನ ಬೆಟ್ಟ ಎಂದು ಕರೆಯುತ್ತಾರೆ. ಇದು ಸರಿ ಸುಮಾರ 360 ಎಕರೆಯೆಷ್ಟು ವ್ಯಾಪಿವನ್ನು ಹೊಂದಿದ್ದು, ಭೂ ಮಟ್ಟದಿಂದ ಸು. 800 ಮೀಟರಗೂ ಅಧಿಕ ಎತ್ತರದಲ್ಲಿದೆ. ಈ ಬೆಟ್ಟದಲ್ಲಿ ಅನೇಕ ಉಪಭಾಗಗಲ್ಲಿದ್ದು ಅವುಗಳನ್ನು ಸ್ಥಳೀಯರು ಕನಕಪ್ಪನಮಟ್ಟಿ, ಜಾರಿಕೆ ಬಂಡಿಮಟ್ಟಿ, ದುಂಡನ ಮಟ್ಟಿ, ಗರ್ಜಿನಮಟ್ಟಿ, ಎಮ್ಮಿಡೋಣಿ, ಕೋತಿಗುಂಡು, ಎಲ್ಲಮ್ಮನಡೋಣಿ, ಬಂಡಿ ಹೋಟೆಲ್, ಬೈಲಿ, ಹಸರಮ್ಮನ ಗವಿ ಮತ್ತು ದೆವ್ವನಕೊಳ ಎಂಬ ಹೆಸರುಗಳಿಂದ ಕರೆಯುತ್ತಾರೆ.

---

1.ಸಂಶೊಧನಾ ವಿದ್ಯಾರ್ಥಿ, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ,ಕನ್ನಡ ವಿಶ್ವವಿದ್ಯಾಲಯ ಹಂಪಿ.
2.ಮಾರ್ಗದರ್ಶಕರು ಮತ್ತು ಮುಖ್ಯಸ್ಥರು, ಸ್ನಾತಕ ಮತ್ತು ಸ್ನಾತಕೋತ್ತರ ಇತಿಹಾಸ ವಿಭಾಗ, ಶ್ರೀ.ಡಿ. ದೇವರಾಜ ಅರಸು ಸರಕಾರಿ ಪ್ರಥಮ ದರ್ಜೆ ಕಾಲೇಜು, ಹುಣಸೂರು.

ಈ ಗುಡ್ಡದಲ್ಲಿ ಹುಲಿ, ಜಿಂಕೆ, ಗೂಳಿ, ಹಸು, ಕಡವೆ, ಮನುಷ್ಯ, ಪಾದದಮುದ್ರಿಕೆಗಳು, ನಾಯಿ, ಆನೆ, ಕುದುರೆ ಸವಾರಿ ಮತ್ತು ಪ್ರಾಣಿಬೇಟೆಯ ಚಿತ್ರಗಳನ್ನು ಒಳಗೊಂಡಂತೆ ಸುಮಾರು 100ಕ್ಕೂ ಅಧಿಕ ಕುಟ್ಟು ಚಿತ್ರಗಳು ಕಂಡುಬರುವುದು ವಿಶೇಷ ಎಂದು ಹೇಳಬಹುದು; ಇವುಗಳ ರಚನಾ ಶೈಲಿ ಮತ್ತು ವಿನ್ಯಾಸದ ದೃಷ್ಟಿಯಿಂದ ನವಶಿಲಾಯುಗ–ಶಿಲಾತಾಮ್ರಯುಗಕ್ಕೆ ಸಂಬಂಧಿಸಿದ್ದು ಮಸ್ಕಿಯ ಬೆಟ್ಟದಲ್ಲಿ ಕಂಡುಬಂದಿರುವ ಚಿತ್ರಗಳೊಂದಿಗೆ ಹೆಚ್ಚು ಸಾಮತ್ಯೆಯನ್ನು ಹೊಂದುತ್ತವೆ ಎಂದು ಹೇಳಬಹುದಾಗಿದೆ.

**ಕನಕಪ್ಪನ ಮಟ್ಟಿ :** ಈ ಮಟ್ಟಿಯು ಇಡಿ ಬೆಟ್ಟದಲ್ಲಿಯೇ ಅತ್ಯಂತ ಎತ್ತರವಾದ ಮಟ್ಟಿಯಾಗಿದೆ. ಇಲ್ಲಿನ ಸ್ಥಳೀಯರಿಗೆ ಅನಾದಿ ಕಾಲದಿಂದಲೂ ಆಧ್ಯಾತಿಕ ಕೇಂದ್ರವಾಗಿದೆ. ಇಲ್ಲಿ ನವಶಿಲಾಯುಗದ ಮಾನವ ನೆಲೆಸಿದ್ದ ಎನ್ನುವುದಕ್ಕೆ ಸಾಕ್ಷಿಯಾಗಿ ಇಲ್ಲಿನ ಕಲ್ಲಾಸರೆ ಮತ್ತು ಅಲ್ಲಿ ದೊರೆಯುವಂತ ಅನೇಕ ಪ್ರಾಗಿತಿಹಾಸದ ಕುರುಗಳು. ಇಲ್ಲಿರುವ ನವಶಿಲಾಯುಗದ ಕೈಕೊಡಲಿ ಕನಕಪ್ಪ ಎಂದು ಆರಾಧಿಸಲಾಗುತ್ತಿರುವುದು ವಿಶೇಷ. ಈ ಪ್ರದೇಶದಲ್ಲಿ ಅನೇಕ ವಿಶಿಷ್ಟ ಕುಟ್ಟು ಚಿತ್ರಗಳು ಕಂಡುಬಂದಿದ್ದು, ಅವುಗಳಲ್ಲಿ ಪ್ರಮುಖವಾದವುಗಳೆಂದರೇ ಕನಕಪ್ಪನ ಗುಡಿಯ ಮೇಲ್ಭಾಗದಲ್ಲಿರುವ ಬಂಡೆಯೊಂದಕ್ಕೆ ಗೂಳಿಯ ಕುಟ್ಟುಚಿತ್ರವಿದ್ದು, ಅದರ ಡುಬ್ಬದ ಭಾಗವು ಹಡಗಿನ ರೀತಿಯಲ್ಲಿದೆ, ಇದರ ಕೊಂಬುಗಳು ಚೂಪಾಗಿ ರೇಖಾಕೃತಿಯಂತಿದ್ದು ಮೇಲ್ಮೂಕವಾಗಿ ಚಾಚಿವೆ. ಇದರ ಮುಂಭಾಗದಲ್ಲಿ ಮತ್ತೊಂದು ಗೂಳಿಯ ಚಿತ್ರವಿದ್ದು ಇದು ಮಸ್ಕಿ ಮಲ್ಲಯ್ಯನ ಗುಡ್ಡದಲ್ಲಿ ದೊರೆತಿರುವ ಪ್ರತಿರೂಪದಂತಿದೆ. ಇದರ ಮುಂಭಾಗದಲ್ಲಿ ಅಸ್ಪಷ್ಟವಾದ ಬರಹ/ಲಿಪಿಯಿದೆ. ಇದರ ಮೇಲಿನ ಬಂಡೆಗೆ ಹಸುವಿನ ಚಿತ್ರ ಕಂಡುಬಂದಿದ್ದು ಅದು ತನ್ನ ಮುಖವನ್ನು ಹಿಂದಕ್ಕೆ ತಿರುಗಿಸಿ ನೋಡುವ ರೀತಿಯಲ್ಲಿದ್ದು ಉದರಭಾಗವನ್ನು ದೊಡ್ಡದಾಗಿಯೂ ಮತ್ತು ಕಿವಿಗಳನ್ನು ಸ್ಪಷ್ಟವಾಗಿಯೂ ಕೆತ್ತಲಾಗಿದೆ.

ಇಲ್ಲಿನ ಮತ್ತೊಂದು ಬಂಡೆಗೆ ಎರಡು ಗೂಳಿಗಳ ಚಿತ್ರಗಳನ್ನು ಕುಟ್ಟಲಾಗಿದ್ದು ಇವು 80 ಸೇ.ಮೀ ಎತ್ತರ ಮತ್ತು 40 ಸೇ.ಮೀ ಅಗಲ ಅಳತೆಯನ್ನು ಹೊಂದಿವೆ. ಇವು ಈ ನೆಲೆಯಲ್ಲಿಯೇ ದೊರೆತಂತಹ ಅತ್ಯಂತ ದೊಡ್ಡ ಚಿತ್ರಗಳಾಗಿವೆ. ಇವುಗಳ ಕಿವಿಗಳನ್ನು ಸ್ಪಷ್ಟವಾಗಿ ಬಿಡಿಸಲಾಗಿದೆ, ಇದರ ಕೊಂಬುಗಳು ಇಂಗ್ಲೀಷ್ ವರ್ಣಮಾಲೆಯ **'ಯು'** ಹೋಲುವಂತೆ ಬಿಡಿಸಲಾಗಿದೆ. ಮೇಲ್ಭಾಗದ ಕೊನೆಯ ಬಂಡಿಗೆ ಹಲವು ಚಿತ್ರಗಳಿದ್ದು ಅವುಗಳಲ್ಲಿ ಗುಂಪಾಗಿ ಮಾನವರ ಕುಟ್ಟು ಚಿತ್ರಗಳು, ಮತ್ತೊಂದು ಚಿತ್ರದಲ್ಲಿ ಗೂಳಿಯ ಚಿತ್ರವಿದ್ದು ಅದರ ಕೋಡುಗಳು ಮುಂದಕ್ಕೆ ಭಾಗಿದ ರೀತಿಯಲ್ಲಿವೆ. ಇದರ ಕೆಳಭಾಗದಲ್ಲಿ ವ್ಯಕ್ತಿಯೊರ್ವನು ಬಲಗೈಯಿಂದ ಗೂಳಿಯ ಮುಖವನ್ನು ಹಿಡಿದಿರುವಂತೆ ಬಿಡಿಸಿರುವುದು ವಿಶೇಷವೆನ್ನಬಹುದು. ಈ ಚಿತ್ರದ ಮೇಲ್ಭಾಗದಲ್ಲಿ ಮತ್ತೊಂದು ಚಿತ್ರವಿದ್ದು ಪ್ರಾಣಿಯೊಂದರ ಮೇಲೆ ವ್ಯಕ್ತಿಯೊಬ್ಬ ನಿಂತು ಅದನ್ನು ನಿಯಂತ್ರಿಸಿರುವಂತೆ ಬಿಡಿಸಲಾಗಿದೆ. ಹಿಂಭಾಗದ ಬಂಡೆಯೊಂದರ ಮೇಲೆ ವಿವಿಧ ಪ್ರಾಣಿಗಳ, ಮನುಷ್ಯರ ಚಿತ್ರಗಳಿವೆ, ಇವುಗಳ ಕೆಳಭಾಗದಲ್ಲಿ ಎರಡು ನಾಯಿಗಳ ಚಿತ್ರವಿರುವುದು ಇದು ಬಹುಶಃ ಬೇಟೆಗಾರಿಕೆಯನ್ನು

ತೋರಿಸಲು ಬಿಡಿಸಿರಬಹುದಾಗಿದೆ. ಇದರ ಪಕ್ಕದ ಬಂಡೆಗೆ ಮನುಷ್ಯರನ್ನು ಎರಡು ಸಾಲುಗಳಲ್ಲಿ ಬಿಡಿಸಿದ್ದು ನೃತ್ಯದಲ್ಲಿ ತೊಡಗಿರುವಂತೆ ಬಿಡಿಸಲಾಗಿದೆ. ಇದರ ಕೆಳಭಾಗದಲ್ಲಿ ಮತ್ತೊಂದು ಬಂಡೆ ನಾಲ್ಕು ನಾಯಿಗಳ ಚಿತ್ರಗಳು ಮತ್ತು ಮುಂದೇ ಎರಡು ಅಂದರೆ ಒಟ್ಟು 6 ನಾಯಿಯ ಚಿತ್ರಗಳು ಒಂದೇ ಕಡೆ ಕಂಡುಬರುವುದು ಇಲ್ಲಿನ ಮತ್ತೊಂದು ವಿಶೇಷವೆಂದೇ ಹೇಳಬಹುದು.

**ಜಾರಿಕೆ ಬಂಡಿಮಟ್ಟಿ**ಯಲ್ಲಿ ಮೂರು ಜಿಂಕೆಯ ಚಿತ್ರಗಳು ಕಂಡು ಬಂದಿದ್ದು ಇವು ಹೆಚ್ಚು ಸ್ಪಷ್ಟತೆಯಿಂದ ಕೂಡಿವೆ, ಇವುಗಳು ಮುಖವನ್ನು ತಮ್ಮ ಎಡಭಾಗಕ್ಕೆ ತಿರಿಗಿಸಿದ್ದು, ಇವುಗಳ ಕೆಳಭಾಗದಲ್ಲಿ ನಾಯಿಯ ಚಿತ್ರವಿರುವುದು ವಿಶೇಷ, ಬಹುಶಃ ಇದು ಬೇಟೆಗಾರಿಕೆಯ ಸೂಚಕವಾಗಿರಬಹುದು. ಇದರ ಮುಂದಿನ ಬಂಡೆಗೆ ಎರಡು ಗೂಳಿಯ ಚಿತ್ರಗಳು, ಮತ್ತೊಂದು ಬಂಡೆಗೆ ಗೂಳಿ ಮತ್ತು ಎರಡು ಜಿಂಕೆಗಳ ಚಿತ್ರ ಜಿಂಕೆಗಳನ್ನು ನಾಯಿ ಬೇಟೆಯಾಡುತ್ತಿರುವಂತೆ ಬಿಡಿಸಿದ ಚಿತ್ರ, ಮತ್ತೊಂದು ಬಂಡೆಗೆ ಜೊಡು ಪಾದಗಳ ಕುಟ್ಟು ಚಿತ್ರಗಳು ಮತ್ತು ಕೆಳಭಾಗದ ಮತ್ತೊಂದು ಬಂಡೆಗೆ ಹುಲಿಯ ಚಿತ್ರವಿದ್ದು ಇದು ರಚನಾ ಶೈಲಿ ಮತ್ತು ವಿನ್ಯಾಸದಿಂದ ಭಿನ್ನಾವಾಗಿದೆ. ಹೀಗೆ ಈ ಮಟ್ಟಿಯಲ್ಲಿ ಒಟ್ಟು 15ಕ್ಕೂ ಅಧಿಕ ಸಣ್ಣ ಸಣ್ಣ ಚಿತ್ರಗಳು ಕಂಡುಬಂದಿವೆ.

**ದುಂಡನ ಮಟ್ಟಿ :** ಇಲ್ಲಿ ಕೂಡ ಅನೇಕ ಚಿತ್ರಗಳಿದ್ದು ಅವುಗಳಲ್ಲಿ ಮುಖ್ಯವಾಗಿ ಐದು ಕಡ್ಡಿಯಾಕಾರದ ಮನುಷ್ಯರ ಕುಟ್ಟು ಚಿತ್ರಗಳಿದ್ದು ಇವರು ಪರಸ್ಪರ ಕೈಗಳನ್ನು ಹಿಡಿದು ಸಾಲಾಗಿ ನಿಂತಿದ್ದು, ಇದನ್ನು ಸಾಮೂಹಿಕ ನೃತ್ಯ ಮಾಡುತ್ತಿರುವ ಸಾಂಕೇತಿಕವಾಗಿ ತೋರಿಸಲು ಬಿಡಿಸಿರಬಹುದೆಂದು ಎಂದು ತರ್ಕಿಸಲಾಗಿದೆ. ಇದರ ಮೇಲ್ಭಾಗದ ಸಣ್ಣ ಗುಂಡಿಗೆ ಜಿಂಕೆಯ ಚಿತ್ರವಿದ್ದು ಇದರ ಮುಂಡ ಭಾಗ ಮಾತ್ರ ಸ್ಪಷ್ಟವಾಗಿ ಕಂಡುಬರುತ್ತದೆ. ಇದರ ಮುಂದಿನ ಗುಂಡಿಗೆ ಒಂಟಿಯಾಗಿ ನಿಂತಿರುವ ಮನುಷ್ಯ ಹಾಗೂ ಜಿಂಕೆಗಳ ಗುಂಪು ಚಿತ್ರವಿದೆ. ಇದರ ಹಿಂಭಾಗದಲ್ಲಿ ಗೂಳಿಯ ಚಿತ್ರವಿದ್ದು ಅದು 38 ಸೇ.ಮೀ ಉದ್ದ ಮತ್ತು 38 ಸೇ.ಮಿ ಅಗಲದ ಅಳತೆಯನ್ನು ಹೊಂದಿದ್ದು, ಕೊಂಬು/ಕೋಡುಗಳ ಕೆತ್ತನೆಯಿಂದ ಗಮನಸೆಳೆಯುವಂತಹದ್ದು. ಇಲ್ಲಿನ ಮತ್ತೊಂದು ಗುಂಡಿಗೆ ನಾಯಿಯ ಕಟ್ಟು ಚಿತ್ರವಿದ್ದು ಅದರ ದೇಹ ಮತ್ತು ಬಾಲದ ವಿನ್ಯಾಸವು ರಚನಾ ಶೈಲಿಯಿಂದ ಆಕರ್ಷಕವಾಗಿದ್ದು ಅದರ ಬಾಲುವು ತಲೆಯ ಮೇಲೆತ್ತರದವರೆಗೆ ಚಾಚಿ ಬಾಗಿಕೊಂಡಿದೆ. ಅದರ ಕಿವಿಗಳು ನೆಟ್ಟಗೆ ನಿಮಿರಿದ ರೀತಿಯಲ್ಲಿದೆ. ಈ ಮಟ್ಟಿಯ ತೀರ ಕೆಳಭಾಗದಲ್ಲಿ ಒಬ್ಬ ಕಡ್ಡಿಮನುಷ್ಯನ ಕುಟ್ಟುಚಿತ್ರವಿದ್ದು, ಇದರ ಮೇಲ್ಭಾಗದಲ್ಲಿ ಅಡ್ಡವಾಗಿ ನಾಲ್ಕು ಮತ್ತು ಲಂಬವಾಗಿ ನಾಲ್ಕು ಸಾಲುಗಳಲ್ಲಿ ಜಿಂಕೆಗಳ ಗುಂಪು ಚಿತ್ರವಿದ್ದು, ಕೆಳಗಿನ ಸಾಲಿನಲ್ಲಿ ಕೇವಲ ಎರಡು ಜಿಂಕೆಗಳ ಚಿತ್ರಗಳಿದ್ದು, ಎರಡನೇ ಸಾಲಿನಲ್ಲಿ ಮೂರು, ಮೂರನೇ ಮತ್ತು ನಾಲ್ಕನೇ ಸಾಲಿನಲ್ಲಿ ತಲಾ ಐದು

ಹೀಗೆ ಒಟ್ಟು ಹದಿನೈದು(15) ಜಿಂಕೆಗಳ ಚಿತ್ರಗಳು ಒಟ್ಟಿಗೆ ಬಿಡಿಸಿರುವುದು ವಿಶೇಷ. ಒಟ್ಟಾರೆಯಾಗಿ ಈ ಮಟ್ಟಿಯಲ್ಲಿ 40ಕ್ಕೂ ಅಧಿಕ ಚಿತ್ರಗಳಿವೆ.

**ಕೋತಿಗುಂಡು** ಎಂದು ಕರೆಯುವ ಮತ್ತೊಂದು ಮಟ್ಟಿಯಲ್ಲಿ ಅನೇಕ ಅಪರೂಪದ ಚಿತ್ರಗಳಿವೆ. ಅವುಗಳಲ್ಲಿ ಮುಖ್ಯವಾಗಿ ಖಡ್ಗಧಾರಿ ವ್ಯಕ್ತಿಯ ಕುಟ್ಟುಚಿತ್ರವಿರುವುದು ವಿಶೇಷ ಎನ್ನಬಹುದು, ಹಾಗೂ ಬೇಟೆಗಾರಿಯ ಸೂಚಕದಂತಿರುವ ಜಿಂಕೆಯನ್ನು ಸುತ್ತುವರೆದಿರುವ ಮನುಷ್ಯರ ಚಿತ್ರಗಳು, ಆಕರ್ಷಕ ಡುಬ್ಬದ ಗೂಳಿಯ ಚಿತ್ರಗಳು ಕಂಡುಬಂದಿವೆ. ಈ ಭಾಗದಲ್ಲಿ ಕಲ್ಲು ಗಣಿಗಾರಿಕೆ ನಡೆದಿರುವುದರಿಂದ ಇನ್ನೂ ಅನೇಕ ಅಪರೂಪದ ಚಿತ್ರಗಳು ನಾಶವಾಗಿರುವ ಸಾಧ್ಯತೆಗಳಿವೆ.

**ಎಲ್ಲಮ್ಮನ ಡೋಣಿ(ಮಟ್ಟಿ) :** ಸರ್ವಕಾಲಿಕವಾದ ಬೃಹತ್ ನೀರಿನ ಹೊಂಡ/ತೊಟ್ಟಿಗಳಿಂದ್ದು ಇಡಿ ಬೆಟ್ಟಕ್ಕೆ ನೀರಿನ ಮೂಲವಾಗಿರುವುದು ಈ ಮಟ್ಟಿಯ ಪ್ರಾಮುಖ್ಯತೆಯಾಗಿದೆ. ಇಲ್ಲಿ ಕಂಡು ಬರುವ ಬೃಹತ್ ಗಾತ್ರದ ಬಂಡೆಗಳ ಮೇಲೆ ಅನೇಕ ಐತಿಹಾಸಿಕ ಕುರುಹುಗಳು ಕಂಡು ಬರುತ್ತವೆ. ಅದರಲ್ಲಿ ಮುಖ್ಯವಾಗಿ ಕ್ರಿ.ಶ. ಸು 6–7ನೇ ಶತಮಾನದ ಲಿಪಿಯನ್ನು ಹೋಲುವ ಅಸ್ಪಷ್ಟವಾದ ಲಿಪಿಗಳ ಜೊತೆಗೆ ಅನೇಕ ಕುಟ್ಟು ಚಿತ್ರಗಳು ಕಂಡುಬಂದಿದ್ದು; ಇದರಲ್ಲಿ ಮುಖ್ಯವಾಗಿ ಆನೆ ಸವಾರಿಯ ಚಿತ್ರ ವಿಶೇಷವಾಗಿದೆ ಮತ್ತು ಗೂಳಿ, ಜಿಂಕೆ, ದಂಪತಿಗಳ ಚಿತ್ರ, ಕುದುರೆ ಸವಾರಿಯ ಚಿತ್ರ ಮತ್ತು ಸಾಮೂಹಿಕ ನೃತ್ಯದ ಕುಟ್ಟುಚಿತ್ರಗಳು ಕಂಡುಬರುತ್ತವೆ. ಈ ಮಟ್ಟಿಯ ಮುಂದಿನ ಉತ್ತರ ದಿಕ್ಕಿನಲ್ಲಿರುವ ಕಲ್ಲಬಂಡೆಗಳಲ್ಲಿ ಸಹ ಅನೇಕ ಕುಟ್ಟುಚಿತ್ರಗಳು ಕಂಡುಬಂದಿದ್ದು, ಅವುಗಳಲ್ಲಿ ಮುಖ್ಯವಾಗಿ ಕಡ್ಡಿಮನುಷ್ಯರ ಚಿತ್ರಗಳು ಹೆಚ್ಚಾಗಿ ಕಂಡುಬಂದಿವೆ. ಇದರ ಜೊತೆಯಲ್ಲಿ ದಂಪತಿಗಳಾಗಿರಬಹುದಾದ ಜೋಡಿಗಳ ಚಿತ್ರಗಳಿವೆ. ಮತ್ತೊಂದು ಚಿತ್ರದಲ್ಲಿ ಕುದುರೆ ಸವಾರಿಯ ಚಿತ್ರವಿದೆ.

**ದೆವ್ವದ ಕೊಳದ ಮಟ್ಟಿ :** ಈ ಭಾಗದಲ್ಲಿ ಸಹ ಅನೇಕ ಚಿತ್ರಗಳು ಕಂಡುಬಂದಿದ್ದು, ಅವುಗಳಲ್ಲಿ ಮುಖ್ಯವಾಗಿ ಎರಡು ಜಿಂಕೆಗಳು ವಿರುದ್ಧ ದಿಕ್ಕಿಗೆ ಮುಖ ಮಾಡಿ ನಿಂತಿರುವಂತೆ ಒಂದೇ ಚಿತ್ರದಲ್ಲಿ ಬಿಂಬಿಸಲಾಗಿದೆ. ದಂಪತಿಗಳ ಚಿತ್ರ, ಬಿಲ್ಲನ್ನು ಹಿಡಿದಿರುವ ಬೇಟೆಗಾರನ ಚಿತ್ರ ಅವನ ಮುಂದೇ ಅನೇಕ ಪ್ರಾಣಿಗಳ ಚಿತ್ರ, ಹುಲಿಯು ಘರ್ಜಿಸುತ್ತಿರುವ ಚಿತ್ರ, ಮಾನವರ ಚಿತ್ರಗಳು ಸೇರಿದಂತೆ 20ಕ್ಕೂ ಅಧಿಕ ಚಿತ್ರಗಳು ಇಲ್ಲಿ ಕಂಡುಬಂದಿವೆ.

**ನಂಜಲದಿನ್ನಿ ಊರು ಗುಡ್ಡ** : ಈ ಗುಡ್ಡದ ಕಪ್ಪೆಗುಂಡು ಎನ್ನುವ ಬೃಹತ್‌ಬಂಡೆಯ ಮೇಲ್ಭಾಗದಲ್ಲಿ ಎರಡು ಗೂಳಿಯ ಕುಟ್ಟು ಚಿತ್ರಗಳನ್ನು ಸಹ ಕಾಣಬಹುದಾಗಿದೆ.

ಇಂತಹ ಹಲವಾರು ಕುಟ್ಟುಚಿತ್ರಗಳು ಈ ಪರಿಸರದಲ್ಲಿ ಗೋಚರಿಸುತ್ತವೆ. ಇಲ್ಲಿನ ಬೆಟ್ಟ ಪರಿಸರವು ಅಂದಿನ ಜೀವನಾಂಶಕ್ಕೆ ಬೇಕಾಗುವ ನೈಸರ್ಗಿಕ ಪದಾರ್ಥಗಳನ್ನು ಸಂಗ್ರಹ ಮಾಡುವುದರ ಜೊತೆಗೆ ಬೇಟೆಯಾಡಲು ಸೂಕ್ತವಾದ ವಾತಾವರಣವನ್ನು ಒದಗಿಸುತ್ತದೆ. ಈ ಭಾಗದಲ್ಲಿ ಬೇಟೆಯಾಡುವ ಪ್ರವೃತ್ತಿಯು

ಇಂದಿಗೂ ಮುಂದುವರಿಸಿಕೊಂಡು ಬಂದಿದೆ. ಪ್ರಾಗಿತಿಹಾಸ ಕಲೆಯಲ್ಲಿನ ಪ್ರಾಣಿಗಳಲ್ಲಿ ಹೆಚ್ಚಿನವು ವೈವಿಧ್ಯಮಯ ಅಳತೆ ಮತ್ತು ಶೈಲಿಯ ಜಿಂಕೆ, ಗೂಳಿ ಮತ್ತು ಇತರೆ ಪ್ರಾಣಿಗಳ ಕುಟ್ಟು ಚಿತ್ರಗಳು ವಿಶೇಷವಾಗಿದ್ದು, ಇವು ನವ ಶಿಲಾಯುಗವನ್ನು ಪ್ರತಿನಿಧಿಸುತ್ತವೆ. ಈ ರೀತಿಯ ಹಲವಾರು ವೈಶಿಷ್ಟ್ಯತೆಗಳನ್ನು ಒಳಗೊಂಡಿರುವ ಕನಕಪ್ಪನಗುಡ್ಡದ ಕುಟ್ಟುಚಿತ್ರಗಳು ಗಾಳಿ, ಮಳೆ, ಬಿಸಿಲಿಗೆ ತೆರೆದುಕೊಂಡಿದ್ದು, ಬಹುಪಾಲು ಮಾಸಿದಂತೆ ತೋರುತ್ತವೆ. ಇದು ಕ್ರಮೇಣವಾಗಿ ಮರೆಯಾಗುವ ಸಾಧ್ಯತೆ ಇದೆ. ತಿಳಿಗೇಡಿಗಳ ಕಾರ್ಯಗಳು ಹಾಗೂ ಮಾನವನ ದೈನಂದಿನ ಚಟುವಟಿಕೆ ಅಂದರೆ ಕಲ್ಲು ಗಣಿಗಾರಿಕೆಯಿಂದ ಇಂತಹ ನೂರಾರು ಸಂಖ್ಯೆಯ ಚಿತ್ರಗಳು ಕಣ್ಮರೆಯಾಗುವ ದಿನಗಳು ಬಹುದೂರವಿಲ್ಲವೆಂದು ಹೇಳಬಹುದು. ಈ ಮೂಲಕ ಇವುಗಳನ್ನು ವೈಜ್ಞಾನಿಕ ಅಧ್ಯಯನಕ್ಕೆ ಒಳಪಡಿಸಿ ಆ ಚಿತ್ರಗಳ ರಚನಾ ಉದ್ದೇಶ ಮತ್ತು ಪ್ರಾಗಿತಿಹಾಸದ ಮಾನವನ ಸಾಂಸ್ಕೃತಿಕ ಮಹತ್ವವನ್ನು ಅರಿಯಬೇಕಿದೆ. ಹಾಗೂ ಇದನ್ನು ಮುಂದಿನ ಪೀಳಿಗೆಗೆ ಕೊಂಡೊಯ್ಯಬೇಕಾದ ಅನಿವಾರ್ಯತೆಯಿದೆ. ಈ ನಿಟ್ಟಿನಲ್ಲಿ ಇತಿಹಾಸ ಮತ್ತು ಪುರಾತತ್ವ ಸಂಶೋಧಕರು ಇತ್ತ ಹೆಚ್ಚಿನ ಗಮನಹರಿಸಿ ಸಂಶೋಧನೆ ಕೈಗೊಂಡು ಗತಕಾಲದ ಸಂಸ್ಕೃತಿಯ ಮೇಲೆ ಹೊಸಬೆಳಕು ಚೆಲ್ಲುವುದು ಅವಶ್ಯವಿದೆ.

**ಚಿತ್ರಗಳು**



**ಜಾರಿಕೆಬಂಡಿ ಮಟ್ಟಿಯ ಜಿಂಕೆಗಳ ಚಿತ್ರ**



**ಪಾದಗಳ ಚಿತ್ರ**




**ಜಾರಿಕೆಬಂಡಿ ಮಟ್ಟಿಯ ಹುಲಿಯ ಕುಟ್ಟುಚಿತ್ರ**




**ದುಂಡನ ಮಟ್ಟಿಯ–ಮಾನವರ ಸಮೂಹ ನೃತ್ಯ**




ಜಿಂಕೆಗಳ ಸಾಲು 3. ಯು ಆಕಾರದ ಕಂಬುಗಳ್ಳುಳ ಜಿಂಕೆಗಳು




ಎಲ್ಲಮ್ಮನ ಮಟ್ಟಿಯ ಮುಂದೆ ಕಂಡುಬರುವ ಮನುಷ್ಯರ ಚಿತ್ರಗಳು





ಗೂಳಿಗಳ ಚಿತ್ರಗಳು



ಎಲ್ಲಮ್ಮ ಮಟ್ಟಿಯ ಮೇಲಿನ ಗೂಳಿ ಚಿತ್ರ



ಎಲ್ಲಮ್ಮ ಮಟ್ಟಿಯ ಮುಂದಿನ ಆನೆ ಸವಾರಿ ಚಿತ್ರ



**ಕನಕಪ್ಪನ ಗುಡಿಯ ಮೇಲಿನ ಬಂಡೆಗಳಲ್ಲಿ ಕಂಡುಬರುವ 1. ಗೂಳಿ, 2 ಮತ್ತು 3 ಗೂಳಿಗಳ ಚಿತ್ರಗಳು, 4, ನಾಯಿಗಳ ಸಮೂಹದ ಕುಟ್ಟುಚಿತ್ರಗಳು**



**ದೆವ್ವದ ಮಟ್ಟಿಯಲ್ಲಿ ಕಂಡುಬರುವ 1. ಮಾನವರ ಚಿತ್ರ, 2. ಬಿಲ್ಲುಗಾರಿಕೆ ಚಿತ್ರ**

**3. ಅಭಿಮುಖವಾಗಿರುವ ಜಿಂಕೆಗಳ ಚಿತ್ರ 4. ಗೂಳಿ ಮತ್ತು ದಂಪತಿಗಳ ಚಿತ್ರ**

## ಅಡಿ ಟಿಪ್ಪಣಿಗಳು


1. Munn L.,1935, Prehistoric and Protohistoric Finds of the Raichur and Shorapur Districts of H.E.H.the Nizam's State', Man in India 15(4) : 225-250
2. Gordon, D.H., and F.R.Allchin., 1955, Rock Paintings and Engravings in Raichur, Hyderabad, Man 55 (114) :97-99
3. Sundara A, 1985, Rock Bruising in North Karnataka with Particular reference to Billamarayanagudda' Studies in Karnataka History and Cultures (Proceeding of Karnataka History Congress) 1 : 160-167
4. ಚನ್ನಬಸಪ್ಪ ಮಲ್ಕಂದಿನ್ನಿ., 2015, ರಾಯಚೂರು ಜಿಲ್ಲೆಯ ಪ್ರಾಗೈತಿಹಾಸಿಕ ನೆಲೆಗಳು, ಅಶೋಕ ಸಿರಿ (ಸ್ಮರಣ ಸಂಚಿಕೆ), ಪು 119–133
5. ಚನ್ನಬಸಪ್ಪ ಮಲ್ಕಂದಿನ್ನಿ., 2017, ಗಚ್ಚಿನಶ್ರೀ–ಗಚ್ಚಿನ ಹಿರೇಮಠದ ಶ್ರೀಗುರು ಪಟ್ಟಾಧಿಕಾರ ಮಹೋತ್ಸವ ಸ್ಮರಣ ಸಂಚಿಕೆ, ಮಸ್ಕಿಯ ಪ್ರಾಚ್ಯಾವಶೇಷಗಳು, ಪು 5–10
6. ಮೋಹನ್ ಆರ್., 2018, ಇತಿಹಾಸ ದರ್ಪಣ 37–38 ಮಸ್ಕಿ ಮತ್ತು ಲಿಂಗಸೂಗೂರು ಪರಿಸರದ ಬಯಲುಬಂಡೆ ಚಿತ್ರಗಳು:ಇತ್ತಿಚೀನ ಮುಖ್ಯ ಪುರಾತತ್ವ ಸಂಶೋಧನೆಗಳು, ಪು 9–30